# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಶೋರಾಪುರ.

## ಅಪರಾಧಿಕ ಪ್ರಕರಣ ಸಂಖ್ಯೆಃ 953/2025

ಫಿರ್ಯಾದಿದಾರರುಃ ಸರ್ಕಾರದ ಪರ ಕೆಂಭಾವಿ ಪೊಲೀಸ್ ಠಾಣೆ.

**ಃ ವಿರುದ್ಧ ಃ**

ಆರೋಪಿತರುಃ 1. ಅರ್ಜುನ ತಂದೆ ಹೊನ್ನಪ್ಪ ಆಲಗೂರ,
ವಯಸ್ಸುಃ 45 ವರ್ಷ, ಉಃ ಒಕ್ಕಲುತನ,
ಸಾಃ ನಗನೂರು, ತಾಃ ಸುರಪುರ.

## ದೋಷಾರೋಪಣೆ ಃ

ನಾನು ಫಕ್ಕೀರವ್ವ ಕೆಳಗೇರಿ, ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಶೋರಾಪೂರ ಆರೋಪಿತರಾದ ನಿಮಗೆ ಈ ಕೆಳಗಿನ ರೀತಿ ದೋಷಾರೋಪಣೆಗೆ ಗುರಿಪಡಿಸುತ್ತೇನೆ.

ದಿನಾಂಕ 24.08.2024 ರಂದು ಬೆಳಗ್ಗೆ 11.30 ಗಂಟೆಗೆ ಕೆಂಭಾವಿ ಪೋಲೀಸ ಠಾಣೆಯ ವ್ಯಾಪ್ತಿಯಲಿ ಬರುವ ನಗನೂರು ಗ್ರಾಮದದಲ್ಲಿ ಚಾಸಾ-1, 4 ಮತ್ತು 5 ರವರು ಹೊಲದಲ್ಲಿ ತೊಗರಿ ಬೆಳೆಯಲ್ಲಿ ಕೆಲಸ ಮಾಡಿ, ತಮ್ಮ ಹೊಲದಲ್ಲಿ ಬದುವಿನಲ್ಲಿ ಮೇಲಿರುವ ಬೇವಿನಗಿಡದ ಕೆಳಗೆ ಊಟ ಮಾಡುತ್ತಿದ್ದಾಗ, ಈ ಕೇಸಿನ ಆರೋಪಿತನಾದ ನೀನು ನಿನ್ನ ಹೊಲದಲ್ಲಿನಿ ನೀರನ್ನು ಬದುವನ್ನು ಹೊಡೆದು ಚಾಸಾ-4 ರವರ ಹೊಲಕ್ಕೆ ಬಿಡುತ್ತಿರುವಾಗ ಅದರನ್ನು ಪ್ರಶ್ನಿಸಿದ ಚಾಸಾ-4 ರವಗೆ ಕಾಲಿನಿಂದ ಒದ್ದು ನೆಲಕ್ಕೆ ಕೆಡವಿದ್ದು, ಆ ಮೂಲಕ ಭಾ.ನ್ಯಾ.ಸಂ. ಕಲಂ.115(2)ರ ಅಡಿಯಲ್ಲಿ ಅಪರಾಧ ಎಸಗಿದ್ದಿರೆಂದು ನಿಮ್ಮ ವಿರುದ್ಧ ಆರೋಪಿಸಲಾಗಿದೆ.

ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಚಾಸಾ 4 ರವರಿವೆ ಕಲ್ಲಿನಿಂದ ಎಡಗಡಲ ತೊಡೆಯ ಮೇಲೆ ಮತ್ತು ಮೊಳಕಾಲ ಮೇಲೆ ಹೊಡೆದಿದ್ದು, ಇದರಿಂದ ಚಾಸಾ-4 ರವರಿಗೆ ಎಡ ಸೊಂಟದಿಂದ ಎಡಗಾಲ ಮೊಳಕಾಲವೆರೆಗೆ ಭಾರಿ

ಗಾಯಗಳಾಗಿದ್ದು, ಆ ಮೂಲಕ ಭಾ.ನ್ಯಾ.ಸಂ. ಕಲಂ.118(2) ರ ಅಡಿಯಲ್ಲಿ ಅಪರಾಧ ಎಸಗಿದ್ದಿರೆಂದು ನಿಮ್ಮ ವಿರುದ್ಧ ಆರೋಪಿಸಲಾಗಿದೆ.

ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಚಾಸಾ 4 ರವರ ಜೋತೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ಭಾ.ನ್ಯಾ.ಸಂ.ಕಲಂ.352 ರ ಅಡಿಯಲ್ಲಿ ಅಪರಾಧ ಎಸಗಿದ್ದಿರೆಂದು ನಿಮ್ಮ ವಿರುದ್ಧ ಆರೋಪಿಸಲಾಗಿದೆ.

ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಚಾಸಾ 4 ರವರಿಗೆ ಜೀವ ಬೇದರಿಕೆ ಹಾಕಿದ್ದು, ಆ ಮೂಲಕ ಭಾ.ನ್ಯಾ.ಸಂ.ಕಲಂ.351(2) ರ ಅಡಿಯಲ್ಲಿ ಅಪರಾಧ ಎಸಗಿದ್ದಿರೆಂದು ನಿಮ್ಮ ವಿರುದ್ಧ ಆರೋಪಿಸಲಾಗಿದೆ ಹಾಗೂ ನಿವೆಲ್ಲರೂ ಮೇಲಿನ ಅಪರಾಧಗಳಿಗಾಗಿ ವಿಚಾರಣೆಗೆ ಗುರಿಯಾಗಬೇಕೆಂದು ನಿರ್ದೇಶಿಸುತ್ತೇನೆ.

ಪ್ರ ಃ ನಿಮಗೆ ಮೇಲಿನ ಹೇಳಿಕೆಯನ್ನು ಓದಿ ತಿಳಿಸಿ ಹೇಳಿದ್ದು ನಿಮಗೆ ಅರ್ಥವಾಯಿತಾ?

ಉತ್ತರ ಃ ಆರೋಪಿ ನಂ. 1

ಪ್ರ ಃ ನೀವು ಮೇಲಿನ ಹೇಳಿಕೆಯನ್ನು ಓಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತಿರೊ ?

ಉತ್ತರ ಃ ಆರೋಪಿ ನಂ. 1

(ಮೇಲಿನ ಹೇಳಿಕೆಯನ್ನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ತಿಳಿಸಿ ಹೇಳಿ ಅವರು ಉತ್ತರಿಸಿದ ಭಾಷೆಯಲ್ಲಿ ಅವರ ಉತ್ತರಗಳನ್ನು ಬರೆಯಲಾಯಿತು ಎಂದು ಧೃಡಿಕರಿಸಿದೆ).

ದಿನಾಂಕ ಃ 09.03.2026

(ಫಕ್ಕೀರವ್ವ ಕೆಳಗೇರಿ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಶೋರಾಪುರ.